**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 889 |
| ಸದಸ್ಯರ ಹೆಸರು | : | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.12.2023 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಹಾಸನ ಜಿಲ್ಲೆ, ಹಾಸನ ತಾಲೂಕು, ಕಸಬಾ ಹೋಬಳಿ ಚಿಕ್ಕಕೊಂಡಗೊಳ ಗ್ರಾಮದ ಸರ್ವೆ ನಂಬರ್ 7, 10, 25, 106, 107 ಮತ್ತು 137 ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣದ ಸರ್ಕಾರಿ ಭೂಮಿ ಹೊಂದಿರುತ್ತದೆ; ಈ ಸರ್ಕಾರಿ ಜಾಗವು ಹಾಸನ ನಗರಕ್ಕೆ ಎಷ್ಟು ಅಂತರದಲ್ಲಿದೆ; ಕರ್ನಾಟಕ ಭೂ-ಕಂದಾಯ ಕಾಯ್ದೆಯ ಸೆಕ್ಷನ್ 94/ಎ4 ರಂತೆ ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿ ಖಾಯಂ ಸಾಗುವಳಿ ಚೀಟಿದಾರರಿಗೆ ಭೂ-ಮಂಜೂರಾತಿ ನೀಡಲು ಅವಕಾಶವಿರುತ್ತದೆಯೇ; ಹಾಗಿದ್ದಲ್ಲಿ, ಭೂ-ಮಂಜೂರಾತಿಯಾದ ಜಮೀನನ್ನು ಎಷ್ಟು ವರ್ಷಗಳವರೆಗೆ ಪರಭಾರೆ ಮಾಡಬಾರದು; (ಸಂಪೂರ್ಣ ವಿವರ ನೀಡುವುದು) | ಹಾಸನ ಜಿಲ್ಲೆ ಮತ್ತು ತಾಲ್ಲೂಕಿನ ಕಸಬಾ ಹೋಬಳಿಯ ಚಿಕ್ಕಕೊಂಡಗೊಳ ಗ್ರಾಮದ ಸ.ನಂ. 7, 10 25, 106, 107 ಮತ್ತು 137 ರಲ್ಲಿ ಒಟ್ಟು 73-03 ಎಕರೆ/ಗುಂಟೆ ವಿಸ್ತೀರ್ಣದ ಸರ್ಕಾರಿ ಜಮೀನಿರುತ್ತದೆ. ಸದರಿ ಜಮೀನು ಹಾಸನ ನಗರಕ್ಕೆ 4 ಕಿ.ಮೀ ಅಂತರದಲ್ಲಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94/ಎ4ರಂತೆ ಪುರಸಭೆ, ನಗರ ಸಭೆ ವ್ಯಾಪ್ತಿಯಲ್ಲಿ ಖಾಯಂ ಸಾಗುವಳಿ ಚೀಟಿದಾರರಿಗೆ ಭೂ ಮಂಜೂರಾತಿ ನೀಡಲು ಅವಕಾಶವಿರುವುದಿಲ್ಲ. ಮೇಲ್ಕಂಡ ಸರ್ವೆ ನಂಬರ್ ಗಳಲ್ಲಿನ ಜಮೀನುಗಳಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮೀಕರಣಗೊಳಿಸಿ ಹಂಗಾಮಿ ಸಾಗುವಳಿ ಚೀಟಿಯನ್ನು ನೀಡಲಾಗಿರುತ್ತದೆ. ಹಂಗಾಮಿ ಮಂಜೂರಾತಿಯಾದ ದಿನಾಂಕದಿಂದ 15 ವರ್ಷಗಳ ಕಾಲ ಪರಭಾರೆ ಮಾಡದಂತೆ ನಿಷೇಧವಿರುತ್ತದೆ. |
| (ಆ) | ಹಾಸನ ನಗರದ ಚಿಕ್ಕಕೊಂಡಗೊಳ ಗ್ರಾಮದ ಸರ್ವೆ ನಂಬರ್ 7, 10, 25, 106, 107 ಮತ್ತು 137 ರಲ್ಲಿನ 73.03 ಎಕರೆ ಸರ್ಕಾರಿ ಭೂಮಿಯನ್ನು ಮಾನ್ಯ ಉಪವಿಭಾಗಾಧಿಕಾರಿಗಳು ಹಾಸನದವರು ಯಾವ ಆಧಾರದಲ್ಲಿ ಖಾಯಂ ಸಾಗುವಳಿ ಚೀಟಿದಾರರಿಗೆ ಮಂಜೂರು ಮಾಡಿರುತ್ತಾರೆ; ಮಂಜೂರಾತಿ ನೀಡಿರುವುದು ಕಾನೂನು ಸಮ್ಮತವಾಗಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಉಪವಿಭಾಗಾಧಿಕಾರಿಗಳು ಹಾಸನದವರು ತಮ್ಮ ಅಧಿಕಾರವನ್ನು ಅಕ್ರಮ ಭೂ-ಮಂಜೂರಾತಿ ಆದೇಶಕ್ಕೆ ದುರ್ಬಳಕೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ವಿವರ ನೀಡುವುದು) | ಹಾಸನ ತಹಶೀಲ್ದಾರರ ಕೋರಿಕೆಯಂತೆ ಉಪವಿಭಾಗಾಧಿಕಾರಿ, ಹಾಸನ ಉಪವಿಭಾಗ, ಹಾಸನ ರವರು ದಿನಾಂಕ:03.04.2018ರಂದು ನೀಡಿರುವ ಆದೇಶದಲ್ಲಿ, ಭೂ ಮಂಜೂರಾತಿ ನಿಯಮಾವಳಿ 1969 ರಡಿಯಲ್ಲಿ ನಿಗಧಿಪಡಿಸಿರುವ ನಮೂನೆ-7 ರಲ್ಲಿ ಸಾಗುವಳಿ ಚೀಟಿಗಳನ್ನು ಕಡತದ ಉದ್ದೇಶಕ್ಕೆ (ಅಂದರೆ ದುರಸ್ತಿ ಉದ್ದೇಶಕ್ಕೆ) ಮಾತ್ರ ಬಳಸಿಕೊಳ್ಳಲು ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 25 ರಂತೆ 25 ವರ್ಷಗಳ ಕಾಲ ಪರಭಾರೆ ನಿಷೇಧ ವಿಧಿಸಿ ಅಗತ್ಯ ಕ್ರಮ ಕೈಗೊಳ್ಳಲು ತಹಸೀಲ್ದಾರ್, ಹಾಸನ ತಾಲ್ಲೂಕು ಇವರಿಗೆ ಆದೇಶ ನೀಡಲಾಗಿರುತ್ತದೆ.<br><br>ಈ ಪ್ರಕರಣದಲ್ಲಿ ಖಾಯಂ ಮಂಜೂರಾತಿ ನೀಡಿರುವುದು ಕಾನೂನುಬದ್ಧವಾಗಿಲ್ಲದಿರುವುದು ಕಂಡುಬಂದಿರುತ್ತದೆ. |
| (ಇ) | ಹಾಸನ ಜಿಲ್ಲೆ, ಹಾಸನ ತಾಲೂಕು, ಕಸಬಾ ಹೋಬಳಿ, ಚಿಕ್ಕಕೊಂಡಗೊಳ ಗ್ರಾಮದ ಸರ್ವೆ ನಂಬರ್ 7, 10, 25, 106, 107 ಮತ್ತು 137 ರಲ್ಲಿ 73.03 ಎಕರೆ ಭೂ-ಮಂಜೂರಾತಿ ಕುರಿತು ತನಿಖೆ ನಡೆಸಿ ಅಕ್ರಮ ಮಂಜೂರಾತಿ | ಕಾನೂನುಬದ್ಧವಲ್ಲದ ಖಾಯಂ ಮಂಜೂರಾತಿಯನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1969ರ ನಿಯಮ 25ರಂತೆ ಭೂ ಮಂಜೂರಾತಿ ಪ್ರಾಧಿಕಾರಿಗೆ ರದ್ದುಪಡಿಸುವ ಅಧಿಕಾರವಿರುತ್ತದೆ. |

| | | |
|---|---|---|
| | ರದ್ದುಗೊಳಿಸಿ ಸರ್ಕಾರಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಕ್ರಮ ವಹಿಸುವುದೇ; ಹಾಗಿದ್ದಲ್ಲಿ, ಕರ್ನಾಟಕ ಭೂ-ಕಂದಾಯ ಕಾಯ್ದೆಯ ನಿಯಮದಂತೆ ಕಲಂ 25/26 ರಲ್ಲಿ ಭೂ-ಮಂಜೂರಾತಿ/ ರದ್ದತಿ ಅಧಿಕಾರ ಯಾರ ವ್ಯಾಪ್ತಿಗೆ ಬರುತ್ತದೆ; ಸರ್ಕಾರಿ ಭೂ ಕಬಳಿಕೆಗಾಗಿ ಅಕ್ರಮ ಭೂ-ಮಂಜೂರಾತಿಯಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕಠಿಣ ಕ್ರಮ ಜರುಗಿಸುವುದೇ? (ಸಂಪೂರ್ಣ ವಿವರ ನೀಡುವುದು) | ಈ ಪ್ರಕರಣದಲ್ಲಿ ತನಿಖೆ ನಡೆಸಿ ಮಂಜೂರಾತಿಯಲ್ಲಿ ಅಕ್ರಮವಾಗಿರುವುದು ಸಾಬೀತಾದಲ್ಲಿ, ಅಕ್ರಮದಲ್ಲಿ ಭಾಗಿಯಾಗಿರುವ ಎಲ್ಲಾ ಹಂತದ ಅಧಿಕಾರಿ/ ನೌಕರರುಗಳ ವಿರುದ್ಧ ಅಗತ್ಯ ಶಿಸ್ತು ಕ್ರಮವಹಿಸಲಾಗುವುದು. |

(ಕಡತ ಸಂಖ್ಯೆ:ಕಂಇ 72 ಎಲ್‌ಜಿಹೆಚ್ 2023)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು